ಭೌಗೋಳಿಕ ಭಾಷಾ ವೈವಿಧ್ಯತೆಯನ್ನು (ಉದಾಹರಣೆಗೆ ಹೊಕೀನ್, ಹಕ್ಕಾ ಮತ್ತು ಸ್ಥಳೀಯ ಭಾಷೆಗಳು) ಬಳಸಿಕೊಂಡು ಆ ಮೂಲಕ ಸ್ಥಳೀಯ ಭಾಷಾ ಸಂಸ್ಕೃತಿಯ ಮಹತ್ವವನ್ನು ಒತ್ತಿಹೇಳುತ್ತಾರೆ. ಸೆಂಗ್ ಮೆಯ್-ಮನ್ ಹಾಗೂ ಲಿನ್ ತಾ-ಯಾಂಗ್ ನಂತಹ ಹೆಸರಾಂತ ಯುವ ಕವಿಗಳ ಕೃತಿಗಳು ಆಧುನಿಕ ಮತ್ತು ಶಾಸ್ತ್ರೀಯ ಅಂಶಗಳ ವಿಶಿಷ್ಟ ಸಂಯೋಜನೆಗೆ ಹೆಸರುವಾಸಿಯಾಗಿದ್ದು, ಭಾಷೆಯ ಬಗ್ಗೆ ತೀವ್ರ ಸಂವೇದನೆಯನ್ನು ಪ್ರದರ್ಶಿಸುತ್ತವೆ. ಈ ಬಗೆಯ ಐಡೆಂಟಿಟಿ ಕಾಂಪ್ಲೆಕ್ಸ್ ಅಂತೂ ಎಲ್ಲಾ ಕಡೆ ಇದೆ. ನಾವು ನಿತ್ಯ ಬಳಸುವ ಭಾಷೆಯನ್ನೇ ಕ್ಷಣಕಾಲ ಅಮಾನತು ಮಾಡಿ, ಹೊಸದು ಎನಿಸುವಂತೆ ಮಾಡ್ತಾರಲ್ಲ? ಅದೇ ನಿಜವಾದ ಕವಿಯ ಗುರುತು!

ಇತ್ತೀಚೆಗೆ ನಾನು ಉಕ್ರೇನಿಯನ್ ಯುವಕವಿ ಐರಿನಾ ಶುವಾಲೋವಾಳ ಮೇಲೆ ಮೆಚ್ಚುಗೆ ಬೆಳೆಸಿ ಕೊಂಡಿದ್ದೇನೆ. ಅವಳು ಯುದ್ಧದ ಕುರಿತಾದ ಪದ್ಯಗಳನ್ನು ವೈವಿಧ್ಯಮಯ ರೂಪಕ, ವಿನ್ಯಾಸಗಳಲ್ಲಿ ಬರೆಯುತ್ತಾಳೆ. ಒಂದೇ ವಿಷಯವನ್ನು ಎಷ್ಟು ಬಗೆಯಲ್ಲಿ ಹೇಳಬಹುದು ಎಂಬುದಕ್ಕೆ ಉದಾಹರಣೆ ಅವಳ ಕಾವ್ಯ. ಜೊತೆಗೆ ಅವಳ ಕೃತಿಗಳು feminine Romance ಮತ್ತು ಬೆಚ್ಚಗಿನ ಅನುಭವದ ಭಾವಗಳನ್ನು ಒಳಗೊಂಡಿರುತ್ತವೆ. ಅವಳ ಪದ್ಯಗಳು ದಿನ ನಿತ್ಯದ ಬದುಕಿನ ಜೊತೆಗೆ ಆಳವಾಗಿ ಬೇರೂರಿವೆ ಮತ್ತು ನೇರವಾಗಿ ಹೃದಯ ತಾಕುವಂತಿವೆ.

◆ **ನಿತ್ಯದ ಜಂಜಾಟದಲ್ಲಿ ಹೆಣ್ಣು ಒಳಗೂ ಹೊರಗೂ ದುಡಿಯುವವಳಾಗಿ, ತನ್ನ ದೈಹಿಕ ಹಾಗೂ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಹೇಗೆ?**

ದೈಹಿಕ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳುವುದು ಯುವ ಪೀಳಿಗೆಯ ಆದ್ಯತೆ. ಇದು ಕೇವಲ ಶಿಕ್ಷಿತ ಮಹಿಳೆಯರ ಜವಾಬ್ದಾರಿಯಲ್ಲ, ಬದಲಿಗೆ ಕುಟುಂಬದ ಎಲ್ಲಾ ಸದಸ್ಯರ ಜವಾಬ್ದಾರಿ. ನ್ಯೂಕ್ಲಿಯರ್ ಕುಟುಂಬಗಳ ಇವತ್ತಿನ ಕಾಲದಲ್ಲಿ 'ವಿವಾಹ' ಹಾಗೂ 'ಫ್ಯಾಮಿಲಿ' ಅನ್ನೋ ಸಾಮಾಜಿಕ ಸಂಸ್ಥೆಗಳು ತಮ್ಮ ಕರ್ತವ್ಯ ಸರಿಯಾಗಿ ನಿರ್ವಹಿಸದಿದ್ದಲ್ಲಿ ಈ ಸಮಸ್ಯೆ ಭುಗಿಲೇಳುತ್ತದೆ. ನೈತಿಕ ಶಿಕ್ಷಣದ ಸೋಲು, ಅತಿಯಾದ ಉಪಭೋಗ ಸಂಸ್ಕೃತಿ,ಅನಾರೋಗ್ಯಕರ ಮನಸ್ಸು ಮತ್ತು ಅಶಕ್ತ ದೇಹದಿಂದಾಗಿ ಖಿನ್ನತೆಯಂತಹ ಅನೇಕ ಆಧುನಿಕ ಕಾಯಿಲೆಗಳು ವ್ಯಾಪಕವಾಗಿ ಹರಡುತ್ತಿವೆ. ಇದನ್ನು ನಿರ್ಲಕ್ಷಿಸುವುದೆಂದರೆ, ಕಣ್ಣಿದ್ದು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಂತೆ ಕುರುಡು ಜೀವನವನ್ನು ನಡೆಸುವುದಾಗಿದೆ!

◆ **ಟೀ ಪಾರ್ಟಿ ನಿಮ್ಮ ಸಂಸ್ಕೃತಿಯ ಒಂದು ಭಾಗ ಇದರ ಬಗ್ಗೆ ಸ್ವಲ್ಪ ಹೇಳಿ. ಇವತ್ತಿನ ಹೊಸ ತಲೆಮಾರು ಈ ಸಾಂಪ್ರದಾಯಿಕ ಆಚರಣೆಯನ್ನು ಹೇಗೆ ನೋಡುತ್ತದೆ?**

ಟೀ ಪಾರ್ಟಿಗಳು ತೈವಾನೀಸ್ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದು, ಕುಟುಂಬ ಅಥವಾ ಸ್ನೇಹಿತರು ಒಟ್ಟು ಸೇರಿದಾಗ ಜರುಗುತ್ತವೆ. ಸಾಂಪ್ರದಾಯಿಕವಾಗಿ, ಈ ಟೀ ಪಾರ್ಟಿಗಳು ಥರೇವಾರಿ ಚಹಾದ ಎಲೆಗಳ ಆಯ್ಕೆ, ತಯಾರಿಕಾ ಪ್ರಕ್ರಿಯೆ ಮತ್ತು Tea-Tasting Ritualಗಳ ಮೇಲೆ ಗಮನ ಕೇಂದ್ರೀಕರಿಸಿರುತ್ತವೆ.

ಹೊಸ ತಲೆಮಾರಿಗೆ, ಚಹಾ ಕೂಟಗಳು ಹೆಚ್ಚು ಕ್ಯಾಶುವಲ್ ಆಗಿವೆ. ಅನೇಕ ಯುವಕರು ಕೆಫೆಗಳಲ್ಲಿ ಅಥವಾ ಮನೆಯಲ್ಲಿ ಒಟ್ಟುಗೂಡಿ ಹಾಲಿನ ಚಹಾ, ಹೂವಿನ ಚಹಾ ಮತ್ತು ಇತರ ಆಧುನಿಕ ಪಾನೀಯಗಳನ್ನು ಆನಂದಿಸುತ್ತಾರೆ. ತೈವಾನಿನ ವಿಶಿಷ್ಟ ಬಬಲ್ ಚಹಾ ಸಂಸ್ಕೃತಿಯು ಕೂಡ ಈಗ ದೈನಂದಿನ ಜೀವನದ ಒಂದು ಭಾಗವಾಗಿದೆ. ಮತ್ತೆ ಅನೇಕರು ಇದನ್ನು ಸಾಮಾಜಿಕ ಕೂಟಗಳಿಗೆ ಜನಪ್ರಿಯ ಪಾನೀಯವಾಗಿ ಪರಿಗಣಿಸುತ್ತಾರೆ. ಆದಾಗ್ಯೂ, ಸಾಂಪ್ರದಾಯಿಕ ಚಹಾ ಕೂಟಗಳು, ಈಗಲೂ ಜನರಿಗೆ ತಮ್ಮ ಹಿರಿಯರೊಂದಿಗೆ ಸಂಪರ್ಕ ಸಾಧಿಸಲು ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮುಂದುವರೆಸುವ ಘಳಿಗೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಎಷ್ಟೋ ಬಗೆಹರಿಯದ ಮನಸ್ತಾಪಗಳು, ಅಪಾರ್ಥಕ್ಕೀಡಾದ ಹುಸಿ ಮುನಿಸುಗಳು, ಮಾತಿನಲ್ಲಿ ಬಗೆಹರಿಯಬಹುದಾದ ಆಸ್ತಿ ಕಲಹಗಳು, ಮದುವೆಯಲ್ಲಿ ಒಂದಾಗುವ ಪ್ರೇಮ ಪ್ರಸಂಗಗಳನ್ನು ಮನೆಯ ಹಿರಿಯರೊಂದಿಗೆ ಕುಳಿತು ಸೌಹಾರ್ದವಾಗಿ ಬಗೆಹರಿಸಿಕೊಳ್ಳುವ ನಿಲ್ದಾಣವಿದು. ಚಹಾ ಕೂಟದ